**2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ.**

ದಿನಾಂಕ 18-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪ್ರತಿವಾದಿ ಪರವಾಗಿ ಮುಂದುವರೆದ ಪಾಟೀ ಸವಾಲು,ಶ್ರೀ ಹೆಚ್ ಬಿ ಎಸ್ ವಕೀಲರಿಂದ:-**

ನನ್ನ ತಾಯಿ ವಿರುದ್ಧ ಅಸಲು ದಾವಾ ಸಂಖ್ಯೆ 66/2023 ರಂತೆ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯ ವಿಚಾರಣೆ ಈ ದಿನವೇ ಇತ್ತು ಎಂದರೆ ಸರಿ. ಸದರಿ ದಾವೆಯನ್ನು ಕ್ರಯದ ಕರಾರು ಪತ್ರದ ಆಧಾರದಲ್ಲಿ ದಾಖಲಿಸಿರುತ್ತೇನೆಂದರೆ ಸರಿ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ವಕೀಲರ ಮೂಲಕ 2020 ರಲ್ಲಿ ಪ್ರತಿವಾದಿಗೆ ನೋಟೀಸನ್ನು ನೀಡಿದ್ದೆ. ಅದಕ್ಕಿಂತ ಪೂರ್ವದಲ್ಲಿ ನೋಟೀಸನ್ನು ನೀಡಿರಲಿಲ್ಲ. ಸದರಿ ನೋಟೀಸಿನಲ್ಲಿ 1.00 ಲಕ್ಷ ರೂಪಾಯಿ ಸಂದಾಯ ಮಾಡಿರುವುದಾಗಿ ತಿಳಿಸಿರುತ್ತೇನೆ. ಪ್ರತಿವಾದಿಗಳಿಗೆ 1.00 ಲಕ್ಷ ನೀಡಿರುವುದಾಗಿ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ವಾದ ಪತ್ರದಲ್ಲಿಯೂ ಸಹ ಪ್ರತಿವಾದಿಗಳಿಗೆ 2.65 ಸಾವಿರ ರೂಪಾಯಿ ಸಂದಾಯ ಮಾಡಿರುವುದಾಗಿ ಹೇಳಿರುತ್ತೇನೆ. ಹಣ ಸಂದಾಯ ಮಾಡಿರುವ ಬಗ್ಗೆ ಒಂದು ಪೇಪರ್ ನಲ್ಲಿ ಬರೆಸಿರುತ್ತೇನೆ. ಕರಾರಿನಲ್ಲಿ ಕಾಲ ಕಾಲಕ್ಕೆ ಹಣವನ್ನು ಕೊಡುವುದಾಗಿ ಬರೆಸಿರುವುದಿಲ್ಲ. ದಿನಾಂಕ 10-2-2018 ರಲ್ಲಿ 60 ಸಾವಿರ,

ಸಾ/ದ

18/7/25

ದಿನಾಂಕ 12-5-2018 ರಲ್ಲಿ 25 ಸಾವಿರ, ದಿನಾಂಕ 25-08-2018 ರಲ್ಲಿ 20 ಸಾವಿರ, ದಿನ್ನಾಂಕ 20-3-2019 ರಲ್ಲಿ 20 ಸಾವಿರ ದಿನಾಂಕ 23-5-2019 ರಲ್ಲಿ 20 ಸಾವಿರ ನೀಡಿರುತ್ತೇನೆ. ಆಯಾಯ ದಿನಾಂಕದಲ್ಲಿ ನನ್ನ ಬಳಿ ಹಣ ಇತ್ತು ಎನ್ನುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹಣ ನೀಡಿದ ಬಗ್ಗೆ ಖಾಲಿ ಪೇಪರ್ ನಲ್ಲಿ ಬರೆಸಿಕೊಂಡಿದ್ದು ಅದನ್ನು ಹಾಜರುಪಡಿಸಿರುತ್ತೇನೆ. 60 ಸಾವಿರ ಹಣ ನೀಡುವಾಗ ಫರ್ದ್ ಖಾನ್ ಮತ್ತು ಅಜೇದ್ ಸಾಬ್ ರವರು ಇದ್ದರು. ಮತ್ತೇ ಹಣವನ್ನು ಪಡೆದುಕೊಂಡಂತಹ ದಿನಗಳಲ್ಲಿ ಸಾಕ್ಷಿದಾರರು ಇರಲಿಲ್ಲ. ಹಣವನ್ನು ಪಡೆದುಕೊಳ್ಳಲಾಗಿದೆ ಎಂದು ಹೇಳಲಾದ ಸಮಯದಲ್ಲಿ ಬರೆಯಲಾಗಿರುವಂತಹ ಕಾಗದದಲ್ಲಿ ಪ್ರತಿವಾದಿಗಳ ಸಹಿ ಇರುವುದಿಲ್ಲ. ಅದನ್ನು ನನ್ನ ಪತ್ನಿ ಬಳಿ ಹೇಳಿ ಬರೆಸಿರುತ್ತಾರೆ. ಕರಾರು ಪತ್ರದಲ್ಲಿ ಹಣ ಸಂದಾಯವಾದ ಬಗ್ಗೆ ಬರೆಸಿರುವುದಿಲ್ಲ. ಆ ರೀತಿ ಹಣ ನೀಡಿದ್ದಲ್ಲಿ ನಿಪಿ-4 ರಲ್ಲಿ ಅದನ್ನು ಬರೆಸಲು ತೊಂದರೆ ಇರಲಿಲ್ಲ. 1.65 ಸಾವಿರ ರೂ. ಹಣವನ್ನು ಬೇರೆ ಬೇರೆ ದಿನಗಳಲ್ಲಿ ಪ್ರತಿವಾದಿಗಳಿಗೆ ಸಂದಾಯ ಮಾಡಿರುವುದಾಗಿ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಗಾಗಿ ಖಾಲಿ ಕಾಗದಗಳಲ್ಲಿ ಹಣ ಸಂದಾಯ ಮಾಡಿರುವುದಾಗಿ ಬರೆಸಿ ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆಯಾಯ ದಿನಗಳಲ್ಲಿ ಮೇಲೆ ಹೇಳಲಾದಂತೆ ಹಣ ಸಂದಾಯ ಮಾಡಲು ನನಗೆ ಆರ್ಥಿಕ ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ 10 ವರ್ಷದಿಂದ ಖಾಯಿಲೆ ಇದೆ ಎಂದರೆ ಸರಿ. ಅದು ನನಗೂ ಗೊತ್ತಿದೆ. ಅವರಿಗೆ ಮಕ್ಕಳಿಲ್ಲ ಎಂದರೆ ಸರಿ. ಅವರಿಗೆ ಆರೋಗ್ಯ ಸರಿ ಇಲ್ಲದೇ ಇರುವುದರಿಂದ ಅವರಿಗೆ ಸೇರಿದ ಸ್ವತ್ತನ್ನು ಅವರ ಪತ್ನಿ ಹೆಸರಿಗೆ ಮಾಡಬೇಕೆನ್ನುವ ಅಭಿಲಾಷೆ ಇತ್ತು ಎಂದರೆ

ಮ ರಾ ದ

6/8/19

ಸರಿಯಲ್ಲ. ಆ ವಿಚಾರವನ್ನು ನನ್ನ ಬಳಿ ಹೇಳಿ ನನ್ನ ಸಹಾಯವನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಹಲವು ದಾಖಲೆಗಳನ್ನು ಪಡೆದುಕೊಳ್ಳಕೆಂದು ಖಾಲಿ ಕಾಗದದಲ್ಲಿ 1 ನೇ ಪ್ರತಿವಾದಿಯ ಸಹಿಯನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಫರೀದ್ ಖಾನ್ ರವರು ಪ್ರತಿವಾದಿಗಳಿಗೂ ಪರಿಚಯಸ್ಥರು ಎಂದರೆ ಸರಿ. 1 ನೇ ಪ್ರತಿವಾದಿಗೆ 2 ಪ್ರತಿವಾದಿಯ ಹೆಸರಿನಲ್ಲಿ ಕಂದಾಯ ದಾಖಲೆಗಳನ್ನು ವರ್ಗಾವಣೆ ಮಾಡಿಕೊಡುವುದಾಗಿ ಹೇಳಿ ಮೋಸ ಮಾಡಿ ನಾನು ಮತ್ತು ಫರೀದ್ ಖಾನ್ ರವರು ನಂಬಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-4 ರ ಸ್ಟ್ಯಾಂಪ್ ಕಾಗದವನ್ನು ನಾನೇ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿಪಿ-4 ರಲ್ಲಿ ನಾನೇ ಕೊಂಡುಕೊಂಡಿರುವುದಾಗಿ ಕಾಣಿಸಲಾಗಿದೆ ಎಂದರೆ ಸರಿಯಲ್ಲ. ಖಾಲಿ ಕಾಗದದಲ್ಲಿ 2 ನೇ ಪ್ರತಿವಾದಿಯ ಸಹಿಯನ್ನು ಪಡೆದುಕೊಂಡಿದ್ದು, ಅದನ್ನು ನೋಡಿಕೊಂಡು ನಿಪಿ-4 ರಲ್ಲಿ ಅದನ್ನು ನಕಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿರುವ ಹೆಬ್ಬೆಟ್ಟು ಮತ್ತು ಸಹಿ ಪ್ರತಿವಾದಿಗಳಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿಪಿ-4 ರಂತೆ ನನ್ನ ಮತ್ತು ಪ್ರತಿವಾದಿಗಳ ನಡುವೆ ಕ್ರಯದ ಕರಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ 1.00 ಸಾವಿರ ರೂಪಾಯಿ ಸಂದಾಯ ಆಗಿರುವುದಾಗಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಫರೀದ್ ಖಾನ್, ನಾನು ಮತ್ತು ರಸೂಲ್ ಖಾನ್ ರವರು ಶಾಮೀಲಾಗಿ ಸುಳ್ಳು ದಾಖಲೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಕರಾರಾದ ದಿನಾಂಕದಿಂದ ಇಲ್ಲಿಯವರೆಗೂ 4.60 ಲಕ್ಷ ಹಣ ನನ್ನ ಬಳಿ ಇತ್ತು ಎಂದು ಹೇಳಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಬಾಕಿ ಹಣ ಸಂದಾಯ ಮಾಡಿ ಕರಾರು ಪತ್ರವನ್ನು ಬರೆಸಿಕೊಳ್ಳಲು ಸಹ ನಾನು ಸದಾ ಸಿದ್ಧನಾಗಿರುವುದಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ವ್ಯವಹಾರ ಆಗದೇ ಇರುವುದರಿಂದಾಗಿ ನಾನು

ಮ ೭/ದ

18/7/13

ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನ ಇರುವುದಾಗಿ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಸ್ವಾಧೀನ ನೀಡಿರುವ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯನ್ನು ಮೋಸದಿಂದ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ರ ಬಗ್ಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾದಾಗಲೇ ತಿಳಿದು ಬಂದಿರುತ್ತದೆ. ಅಲ್ಲಿಯವರೆಗೂ ನಿಪಿ-4 ರ ಬಗ್ಗೆ ಪ್ರತಿವಾದಿಗಳಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ದುಡಿಮೆ ಮಾಡಲು ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ತಕರಾರಿನಲ್ಲಿ ಹೇಳಿರುವಂತಹ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ.

(ತೆ.ನ್ಯಾ.ಸಾ.ಹೇ.ನನ್ನ ಉಕ್ತ ಲೇಖನದಂತೆ ಬೆ.ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

18/11

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಭಧ್ರಾವತಿ.